ಭರತನಿಗೆ ಎಲ್ಲಾ ಆಸ್ತಿಯೂ ಉಳಿಯುತ್ತದೆಂದು ಹಂಚಿಕೆ ಹಾಕಿದ್ದೆ. ಆದರೆ ಭರತ ನನ್ನ ಆಸೆಗಳಿಗೆ ವಿರುದ್ಧವಾಗಿ ರಕ್ತದಾಹಿಯಾಗಿ ಬದಲಾಗಿ ಜೈಲು ಸೇರಿದ. ಅದು ಮಾತ್ರ ನನಗೆ ದುಃಖ ಕೊಡುವ ಸಂಗತಿ ಹೌದು. ಆದ್ರೆ ಅದೇ ಮುಖ್ಯವಲ್ಲ. ಯಾರು ಹೇಗೆ ಹಾಳಾದ್ರೂ ಐ ಡೋಂಟ್ ಕೇರ್, ನಾನು ಮಾತ್ರ ಹೀಗೆ ಕೋಟ್ಯಾಧಿಪತಿಯಾಗಿ ಸಮಾಜದಲ್ಲಿ ಪ್ರೆಸ್ಟೀಜ್ ಉಳಿಸಿಕೊಳ್ಬೇಕು ಅಷ್ಟೇ....ಹಾಗಾಗಿ ಹೇಮಂತ ಈ ಮನೆಯ ಭಾವೀ ಅಳಿಯನಾದ್ಮೇಲೆ ದೇವರ ಮನೆಯಲ್ಲಿ ಕರಿಬೆಕ್ಕು ಬಿಟ್ಟಿದ್ದು, ಸಂಪಿಗೆ ಮರ ಹೊತ್ತಿ ಉರಿದದ್ದು, ಬಂಗಲೆಯ ಕಿಟಕಿ ಗಾಜು ಒಡೆದದ್ದು, ಶ್ರೀಗಂಧದ ಮರ ಕಳುವಾಗಿದ್ದು, ಎಲ್ಲದಕ್ಕೂ ನಾನೇ ಕಾರಣ. ಕಲಾವತಿ ಶಕುನಗಳನ್ನು ನಂಬುತ್ತಾಳೆ ಎಂದು ನನಗೆ ಚೆನ್ನಾಗಿಯೇ ಗೊತ್ತಿತ್ತು. ಹಾಗಾಗಿ ಕೋಟೆ ಬಂಗಲೆಯಲ್ಲಿ ವಿಪರೀತಗಳು ನಡೆಯುವಂತಹ ವಾತಾವರಣವನ್ನು ನಾನೇ ಸೃಷ್ಟಿ ಮಾಡಿದೆ. ನನ್ನ ಊಹೆಯಂತೆಯೇ ಪಾಪದ ಕಲಾವತಿ ಇವನ್ನೆಲ್ಲಾ ಅಪಶಕುನಗಳೆಂದೇ ನಂಬಿ ನಿಮ್ಮ ಮದುವೆಯನ್ನು ಪ್ರಬಲವಾಗಿ ವಿರೋಧಿಸ್ತಾ ಬಂದ್ಲು, ಹಾಗಾಗಿ ನಾನು ಬಚಾವಾದೆ....ನೀನು ನಂದಿಯಿಂದ ಹಿಂದಿರುಗಿದಾಗ್ಲೇ ನಾನು ನಿನ್ನನ್ನು ಇಲ್ಲಿಗೆ ಕಳುಹಿಸ್ಬಹುದಿತ್ತು, ಆದ್ರೆ ನೀನೇನು ಮಾಡ್ತಿ, ನಿನ್ನ ಮುಂದಿನ ನಡೆ ಏನು ಅನ್ನೋದನ್ನು ನಾನು ತಿಳಿದುಕೊಳ್ಬೇಕಿತ್ತು, ಅದಕ್ಕೋಸ್ಕರ ನಾನೂ ಚೆನ್ನಾಗಿಯೇ ನಟಿಸ್ದೆ...'

ಪುರುಷೋತ್ತಮರ ಮಾತಿನಿಂದ ಋತುವಿಗೆ ಸಂಕಟವಾಯಿತು. ಆದರೂ ಹೇಮಂತನ ನೆನಪಾದೊಡನೆ ಮನಸ್ಸು ಗೆಲುವಾಯಿತು.

'ಪಪ್ಪ, ನಿಮ್ಮನ್ನು ನೀವು ತುಂಬಾ ಬುದ್ಧಿವಂತ್ರು ಅಂತ ಅಂದುಕೊಂಡಿದ್ದೀರಿ ಅಲ್ವಾ? ನಾನು ಹೇಮಂತನಿಗೆ ಎಲ್ಲಾ ವಿಷಯಗಳನ್ನೂ ನಿನ್ನೆಯೇ ತಿಳಿಸಿದ್ದೇನೆ, ಇನ್ನೇನು ಅವನ ಸ್ನೇಹಿತ ಅಜಯ್ ಕುಲಕರ್ಣಿ ನಿಮ್ಮೆಲ್ಲರನ್ನೂ ಅರೆಸ್ಟ್ ಮಾಡೋಕೆ ಪೊಲೀಸ್ ಪರಿವಾರದ ಸಮೇತ ಬಂದು ಬಿಡ್ತಾರೆ ನೋಡ್ತಿರಿ, ಇಷ್ಟು ವರ್ಷ ಈ ಕೋಟೆ ಬಂಗ್ಲೇಲಿ ನೀವಾಡಿದ ಆಟ ಇವತ್ತಿಗೆ ಮಗಿಯುತ್ತೆ...' ಕೋಪದಿಂದ ಬಿರುಸಾಗಿ ಮಾತನಾಡಿದಳು ಋತು. ಅವಳ ಮಾತುಗಳನ್ನು ಕೇಳಿ ಪುರುಷೋತ್ತಮರು ಜೋರಾಗಿ ನಗತೊಡಗಿದ್ದರು.

'ಅಯ್ಯೋ ಋತು, ಅದಕ್ಕೇ ನಿನ್ನನ್ನು ನಾವೆಲ್ಲಾ ಬೆಪ್ಪುತಕ್ಕಡಿ ಅನ್ನೋದು. ಇತ್ತೀಚೆಗೆ ನಂಗೆ ಚಂದ್ರಪ್ಪನ ಮೇಲೆ ಅನುಮಾನ ಶುರುವಾಗಿತ್ತು, ನನಗೆ ಗೊತ್ತಿಲ್ದೇ ಅವನೇನಾದರೂ ಕಿತಾಪತಿ ಮಾಡ್ತಾನಂತ ಅನುಮಾನಪಟ್ಟು ನೆಲಮಾಳಿಗೆಗೆ ಸಿಸಿ ಕ್ಯಾಮೆರಾವನ್ನು ಫಿಟ್ ಮಾಡಿಸಿದ್ದೆ. ರಾತ್ರಿ ಬಂಗ್ಲೆಗೆ ಹಿಂದಿರುಗಿದ್ಮೇಲೆ ಆ ದಿನದಲ್ಲಿ ನಡೆದದ್ದನ್ನೆಲ್ಲಾ ನೋಡುವ ರೂಢಿಯನ್ನು ಮಾಡಿಕೊಂಡಿದ್ದೆ. ಹಾಗೆಯೇ ನಿನ್ನೆ ರಾತ್ರಿ ಅವನ್ನು ನೋಡ್ತಿದ್ದಾಗ ನೀನು ನೆಲಮಾಳಿಗೆಗೆ ಹೋಗಿ ನಿನ್ನ ತಾಯಿಯನ್ನು ನೋಡಿದ್ದು ತಿಳೀತು. ನೀನು ಹೇಮಂತನಿಗೆ ಕಾಲ್ ಮಾಡಿ ವಿಷಯ ತಿಳಿಸಿರ್ತಿ ಅಂತ ತಿಳಿದುಕೊಳ್ಳದೇ ಇರುವಷ್ಟು ದಡ್ಡನಾ ನಾನು?....ಹೇಮಂತನಿಗೆ ಏನು ವ್ಯವಸ್ಥೆ ಮಾಡಬೇಕೋ ಎಲ್ಲ ಮಾಡಿಯಾಗಿದೆ, ಅವನನ್ನು ಮುಗಿಸಲು ಸುಪಾರಿಯನ್ನು ಕೊಟ್ಟಿದ್ದೇನೆ, ಇಷ್ಟು ಹೊತ್ತಿಗೆ ಅವ್ರು ಅವನನ್ನು ಬೇರೆ ಲೋಕಕ್ಕೆ ಪಾರ್ಸೆಲ್ ಮಾಡಿರ್ತಾರೆ, ಇನ್ಮೇಲೆ ನೀನು ನಿಮ್ಮಮ್ಮನ ಜೊತೆಗೆ ಈ ನೆಲಮಾಳಿಗೆಯಲ್ಲಿ ಜೀವನ ಪೂರ್ತಿ ಕೊಳೀಬೇಕು. ನೀನು ಯಾರ ಹಿಂದೆಯೋ ಓಡಿ ಹೋದೆ ಅಂತ ಸುದ್ದಿ ಹಬ್ಬಿಸೋಕೆ ಹೇಗೂ ಚಂದ್ರಪ್ಪ ಇದ್ದಾನೆ..'

ಪುರುಷೋತ್ತಮರ ಕೊನೆಯ ಮಾತಿನಿಂದ ಋತು ಬೆಚ್ಚಿದಳು. ಅವ್ಯಕ್ತವಾದ ಭೀತಿಯಿಂದ ಅವಳು ಕಂಪಿಸತೊಡಗಿದಳು. ಹಾಗಾದರೆ ಹೇಮಂತ ಕೊಲೆಯಾಗಿರಬಹುದೇ? ತಂದೆಯನ್ನು ಸುಲಭವಾಗಿ ಊಹೆ ಮಾಡಿದ್ದೇ ದೊಡ್ಡ ಪ್ರಮಾದವಾಗಿ ಹೋಗಿತ್ತು. ನಂದಿಯಲ್ಲಿದ್ದಾಗಲೇ ಆತನ ಬಗ್ಗೆ ಅಪ್ಪಾಜಿ ಎಚ್ಚರಿಕೆಯನ್ನೂ ನೀಡಿದ್ದರು. ಅದನ್ನು ತಾನು ಲಘುವಾಗಿ ತೆಗೆದುಕೊಳ್ಳದೇ ಇಲ್ಲಿಗೆ ಬಂದ ಕೂಡಲೇ ಅವರನ್ನು ಬಂಧಿಸಿ ತಾಯಿಯ ಬಗೆಗಿನ ರಹಸ್ಯವನ್ನು ಬಾಯ್ಬಿಡಿಸಬೇಕಿತ್ತು. ಭರತ ಬಂಧಿತನಾದ ಶಾಕ್ನಲ್ಲಿ ಇವೆಲ್ಲವನ್ನೂ ತಾನು ಯೋಚಿಸಲೇ ಇಲ್ಲವಲ್ಲ.

ಹೇಮಂತನನ್ನು ನೆನೆದು ಅವಳ ದುಃಖ ಮೇರೆ ಮೀರಿತು. ಬಿಕ್ಕಿ ಬಿಕ್ಕಿ ಅಳುವುದಕ್ಕೆ ಅವಳು ಆರಂಭಿಸಿದಳು. ಇದುವರೆಗೆ ಮೂಲೆಯಲ್ಲಿ ಕುಳಿತು ಇವರಿಬ್ಬರ ಮಾತುಗಳನ್ನು ಕೇಳುತ್ತಿದ್ದ ಹೇಮಲತಾಳಿಗೆ ಏನನ್ನಿಸಿತೋ.... ಮೇಲೆದ್ದು ಬಂದು ಋತುವಿನ ಪಕ್ಕದಲ್ಲಿ ಕುಳಿತು ಅವಳ ಕೈಗಳನ್ನು ಹಿಡಿದುಕೊಂಡಳು.

## ಇಲ್ಲಿಯವರೆಗೆ



ಆ ಮಧ್ಯಾಹ್ನ ನೆಲಮಾಳಿಗೆಯಲ್ಲಿ ತನ್ನ ತಾಯಿಯನ್ನು ನೋಡಿದ ಋತುವಿಗೆ ಅಚ್ಚರಿ, ಶಾಕ್ ಎರಡೂ ಒಟ್ಟಿಗೆ ಆಗಿ ಕಂಗಳು ತುಂಬಿ ಬಂತು. ಚಂದ್ರಪ್ಪ ಮತ್ತು ಸುಂದರಿ ದಿನಾ ಮಧ್ಯಾಹ್ನ ಕಣ್ಮರೆಯಾಗುತ್ತಿದ್ದುದರ ರಹಸ್ಯ ತಿಳಿಯಿತು ಋತುವಿಗೆ. ಇದಕ್ಕೆಲ್ಲ ಕಾರಣ ಪುರುಷೋತ್ತಮ ಎಂಬುದನ್ನು ತಿಳಿದ ಋತು ತಕ್ಷಣ ಹೇಮಂತನಿಗೆ ಎಲ್ಲ ವಿಷ್ಯ ತಿಳಿಸುತ್ತಾಳೆ.

'ನೋಡಿದ್ಯಾ ಋತು, ನಿಮ್ಮಮ್ಮನೇ ನಿನ್ನ ಜೊತೆಯಾದ್ರು, ನಿನ್ನ ತಾಯಿ ಹಾಗೂ ಪ್ರೇಮಿಯ ಹೆಸರುಗಳಲ್ಲೂ ಹೋಲಿಕೆಯಿದೆ, ಅದಕ್ಕೆ ನಿನ್ನ ತಾಯಿ ಎಲ್ಲರಿಂದ ಕಣ್ಮರೆಯಾದರೆ ನಿನ್ನ ಪ್ರೇಮಿ ಈ ಪ್ರಪಂಚದಿಂದ್ಲೇ ಕಣ್ಮರೆಯಾಗ್ತಿದ್ದಾನೆ, ಇನ್ನು ಈ ನೆಲಮಾಳಿಗೆಯಲ್ಲಿ ತಾಯಿ ಮಗಳು ಒಬ್ಬರಿಗೊಬ್ಬರು ಸಮಾಧಾನ ಮಾಡಿಕೊಳ್ತಾ ಜೀವನ ಕಳೀಬಹುದು, ಭರತನೊಬ್ಬ ಸರಿಯಾಗಿ ಕೋಟೆ ಬಂಗ್ಲೆಗೆ ಹಿಂದಿರುಗಿ ಬಂದ್ರೆ ಸಾಕು. ಪ್ರಪಂಚದಲ್ಲಿ ನನ್ನಷ್ಟು ಸುಖಿ ಬೇರೆ ಯಾರೂ ಇರಲ್ಲ..' ಎಂದ ಪುರುಷೋತ್ತಮರು ಗಹಗಹಿಸಿ ನಗತೊಡಗಿದರು.

ಅಷ್ಟರಲ್ಲಿ....ಯಾರೋ ನಡೆದು ಬರುತ್ತಿರುವಂತೆ ಬೂಟುಗಾಲಿನ ಸಪ್ಪಳವಾಗತೊಡಗಿತ್ತು. ಗಹಗಹಿಸಿ ನಗುತ್ತಿದ್ದ ಪುರುಷೋತ್ತಮರ ಮುಖದಲ್ಲಿ ಗಾಬರಿ ಇಣುಕಿದರೆ, ಬಿಕ್ಕಳಿಸಿ ಅಳುತ್ತಿದ್ದ ಋತು ಅಳು ನಿಲ್ಲಿಸಿ ಸದ್ದು ಬಂದೆಡೆಗೆ ನೋಡತೊಡಗಿದಳು.

ಇನ್ಸ್‌ಪೆಕ್ಟರ್ ಅಜಯ್ ಕುಲಕರ್ಣಿ ಕೆಲವು ಪೊಲೀಸ್ ಸಿಬ್ಬಂದಿಗಳೊಂದಿಗೆ ಮೆಟ್ಟಲಿಳಿದು ಒಳಬಂದಿದ್ದ. ಅವನ ಜೊತೆಯಲ್ಲಿ ಪ್ರೈವೇಟ್ ಡಿಟೆಕ್ಟಿವ್ ಹೇಮಂತ್ ಕುಮಾರ್....!

ಕೆಲವು ಪೊಲೀಸರು ತೆಗೆದುಕೊಂಡು ಬಂದಿದ್ದ ಎಮರ್ಜೆನ್ಸಿ ದೀಪಗಳನ್ನು ಬೆಳಗಿದರು. ನೆಲಮಾಳಿಗೆಯಲ್ಲಿ ಢಾಳಾಗಿ ತುಂಬಿದ್ದ ಕತ್ತಲು ಓಟ ಕಿತ್ತಿತು. ಇನ್ಸ್‌ಪೆಕ್ಟರ್ ಅಜಯ್ ಒಳಬಂದವನೇ ಪುರುಷೋತ್ತಮರ ಕೈಗಳಿಗೆ ಬೇಡಿ ಹಾಕಿದ.

:'ಇನ್ಸ್‌ಪೆಕ್ಟರ್, ನಂದೇನೂ ತಪ್ಪಿಲ್ಲ, ನಾನು ನಿರಪರಾಧಿ..' ಎಂದೇನೋ ಸಮಜಾಯಿಷಿ ಕೊಡಲು ಯತ್ನಿಸಿದರು ಪುರುಷೋತ್ತಮ್.

'ಸಾಕು ಮಿ.ಪುರುಷೋತ್ತಮ್, ನೀವು ಮಾತನಾಡ್ತಿದ್ದ ಕಾಲವೆಲ್ಲಾ ಮುಗೀತು, ಇನ್ನೇನಿದ್ರೂ ನಿಮ್ಮ ಜೀವಿತವನ್ನೆಲ್ಲಾ ಜೈಲಿನಲ್ಲೇ ಕಳೀಬೇಕು. ಹೆತ್ತವರ ಪುಣ್ಯ ಮಕ್ಕಳನ್ನು ಕಾಪಾಡುತ್ತೆ ಅಂತಾರೆ, ಆದ್ರೆ ನಿಮ್ಮ ಕುತಂತ್ರದ ಬುದ್ಧಿ, ನಿಮ್ಮ ದುಷ್ಟತನದಿಂದ ಪಾಪದ ಭರತ ರಕ್ತದಾಹಿಯಾಗಿ ಜೈಲು ಸೇರಿದ, ಬಿತ್ತಿದಂತೆ ಬೆಳೆ ಅನ್ನೋ ಮಾತನ್ನು ನೀವೂ ಕೇಳಿರ್ಬಹುದು, ನೀವೇನು ಬಿತ್ತಿದಿರೋ ಅದರ ಫಲವನ್ನೇ ಈಗ ಅನುಭವಿಸುತ್ತಿದ್ದೀರಿ...' ಅಜಯ್ ಅರ್ಥಗರ್ಭಿತವಾಗಿ ಮಾತನಾಡಿದಾಗ ಪುರುಷೋತ್ತಮರ ಮಾತುಗಳೆಲ್ಲಾ ಖಾಲಿಯಾಗಿದ್ದವು. ಹೀಗೇಕಾಯಿತು?....ಹೇಮಂತನನ್ನು ಮುಗಿಸುವಂತೆ ಕೊಟ್ಟ ಸುಫಾರಿ ಏಕೆ ವಿಫಲವಾಯಿತು? ಅವರು ಯೋಚಿಸತೊಡಗಿದ್ದರು.

'ಅಂಕಲ್, ಸುಫಾರಿ ಕೊಟ್ರೂ ನಾನ್ಯಾಕೆ ಸಾಯ್ಲಿಲ್ಲ ಅಂತ ನೀವು ಯೋಚ್ನೆ ಮಾಡ್ತಿದೀರ ತಾನೇ?...ಅದನ್ನೂ ಹೇಳಿಬಿಡ್ತೀನಿ, ಕೇಳಿಕೊಂಡು ನಂತರ ಪರಪ್ಪನ